ಪರಿಸ್ಥಿತಿ ಉತ್ತಮಗೊಂಡು ಹೆಚ್ಚಿನ ಜೀಪ್‌ಗಳನ್ನು ವಾಹನಗಳನ್ನು ಕೊಂಡಾಗ ಈ ಬೇಡಿಕೆಯನ್ನು ಆದ್ಯತೆಯ ಮೇಲೆ ಪರಿಗಣಿಸಲಾಗುವುದು.

ಕರ್ನಾಟಕ ಲೋಕಸೇವಾ ಆಯೋಗ ಎಸ್.ಪಿ. /ಎಸ್.ಟಿ ಅಭ್ಯರ್ಥಿಗಳಿಗೆ ನಡೆಸಿದ ಲಿಖಿತ ಪರೀಕ್ಷೆ

2237-ಶ್ರೀ ಎಂ. ನಾರಾಯಣಸ್ವಾಮಿ (ಬೇತಮಂಗಲ) : ಮಾನ್ಯ ಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಕರ್ನಾಟಕ ಲೋಕ ಸೇವಾ ಆಯೋಗವು ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ಅಭ್ಯರ್ಥಿಗಳಿಗೆ ಮೊದಲನೆ ದರ್ಜೆ ಮತ್ತು ಎರಡನೇ ದರ್ಜೆ ಗುಮಾಸ್ತರ ಹುದ್ದೆಗಳಿಗೆ ಲಿಖಿತ ಪರೀಕ್ಷೆಯನ್ನು ಎಂದು ನಡೆಸಿತು.

ಆ) ಅಭ್ಯರ್ಥಿಗಳ ಆಯ್ಕೆ ಪಟ್ಟಿಯನ್ನು ಇದುವರೆಗೂ ಪ್ರಕಟಿಸದಿರಲು ಕಾರಣ ವೇನು?

ಇ) ಈ ಪಟ್ಟಿಯನ್ನು ಜರೂರಾಗಿ ಪ್ರಕಟಿಸಿ, ಆಯ್ಕೆಯಾದ ಅಭ್ಯರ್ಥಿಗಳಿಗೆ ಉದ್ಯೋಗ ನೀಡಲು ಸರ್ಕಾರದವರು ಕ್ರಮ ಕೈಗೊಳ್ಳುವರೆ,ಹಾಗಿದ್ದಲ್ಲಿ ಇವರಿಗೆ ಎಂದಿನಿಂದ ಉದ್ಯೋಗ ನೀಡಲಾಗುವುದು.

ಶ್ರೀ ಎಸ್. ಬಂಗಾರಪ್ಪ (ಮುಖ್ಯಮಂತ್ರಿಗಳು)

ಅ) ಲಿಖಿತ ಪರೀಕ್ಷೆಯನ್ನು ದಿನಾಂಕ 27 ಮತ್ತು 28ನೇ ಏಪ್ರಿಲ್ 1991 ರಂದು ನಡೆಸಲಾಯಿತು.

ಆ) ಈ ಪರೀಕ್ಷೆಗಳಲ್ಲಿ ಅಭ್ಯರ್ಥಿಗಳ ಸಂಖ್ಯೆ ಬಹಳ ಅಧಿಕವಾಗಿದೆ. ಮೌಲ್ಯಮಾಪನವನ್ನು ಗಣಕಯಂತ್ರದಲ್ಲಿ ನಡೆಸಲಾಗುತ್ತದೆ.

ಇ) ಹೌದು, ಆದಷ್ಟು ಜಾಗ್ರತೆ ಕ್ರಮ ತೆಗೆದುಕೊಳ್ಳಲಾಗುವುದು.

ಸರ್ಕಾರಿ ಉದ್ಯೋಗಿಗಳ ಸಂಖ್ಯೆ

2365 - ಶ್ರೀ ಪಿ. ಬಸವರಾಜು (ಬ್ರಹ್ಮಾವರ) : ಮಾನ್ಯ ಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯದಲ್ಲಿರುವ ರಾಜ್ಯ ಸರ್ಕಾರಿ ಉದ್ಯೋಗಿಗಳ ಒಟ್ಟು ಸಂಖ್ಯೆ ಎಷ್ಟು? (ಬೇರೆ ಬೇರೆ ಇಲಾಖೆಗಳ ವಿವಿಧ ವೃಂದಗಳ ಉದ್ಯೋಗಿಗಳ ಸಂಖ್ಯೆಯನ್ನು ಬೇರೆ ಬೇರೆಯಾಗಿ ನೀಡುವುದು)

ಸರ್ಕಾರದ ಸೇವೆಯಲ್ಲಿ ವಿವಿದ ಜಿಲ್ಲಾ ಪ್ರಾತಿನಿಧ್ಯ ಶೇಕಡ ಪ್ರಮಾಣದಲ್ಲಿ ತಿಳಿಸಬಹುದೇ?

ಪ್ರಾದೇಶಿಕ ಅಸಮತೋಲನ ಕಂಡು ಬರುವುದು ನಿಜವೇ.

ನಿಜವಾದಲ್ಲಿ ಅಸಮತೋಲನ ಹೋಗಲಾಡಿಸಲು ಕೈಗೊಂಡ ಕ್ರಮ ತಿಳಿಸಬಹುದೇ.

ಆ) ಮುಂದಿನ ನೇಮಕಾತಿಗಳಲ್ಲಿ ಎಲ್ಲಾ ಜಿಲ್ಲೆಗಳಿಗೂ ಸಮ ಪ್ರಮಾಣದ ನೇಮಕಾತಿಯನ್ನು ಹೊಂದುವಲ್ಲಿ ಕ್ರಮಕೈಗೊಳ್ಳಬಹುದೆ?

ಶ್ರೀ ಎಸ್. ಬಂಗಾರಪ್ಪ (ಮುಖ್ಯಮಂತ್ರಿಯವರು)

ಅ) ದಿನಾಂಕ 31.3.1990ರ ವೇಳೆಗೆ ಇದ್ದ ರಾಜ್ಯ ಸರ್ಕಾರಿ ನೌಕರರ ಸಂಖ್ಯೆ 4,01,926 ಪ್ರತಿಯೊಂದು ಇಲಾಖೆಯ ವಿವಿಧ ವೃಂದಗಳ ಬಗ್ಗೆ ಮಾಹಿತಿ ಸಂಗ್ರಹಿಸಲಾಗಿರುವುದಿಲ್ಲ

ಆ) ರಾಜ್ಯ ಸರ್ಕಾರದಲ್ಲಿನ ಸೇವೆಯಲ್ಲಿ ಜಿಲ್ಲಾವಾರು ಪ್ರಾತಿನಿಧ್ಯತೆಯ ಬಗ್ಗೆ ಮಾಹಿತಿ ಲಭ್ಯವಿಲ್ಲ

ಇ) ಹೌದು

ಈ) ಅಸಮಾನತೆಯನ್ನು ನಿವಾರಿಸಲು ಅಗತ್ಯ ಸೂಚನೆಗಳನ್ನು ನೀಡಲಾಗಿದೆ.

ಉ) ಉದ್ಭವಿಸುವುದಿಲ್ಲ.

ಮಧ್ಯದಂಗಡಿಗಳ ಸಿ.ಎಲ್.2 ಲೈಸೆನ್ಸ್‌ಗಳ ಕೋಟಾ ಕುರಿತು

2368 - ಶ್ರೀ ಪಿ. ಬಸವರಾಜು (ಬ್ರಹ್ಮಾವರ) : ಮಾನ್ಯ ಗೃಹ ಮತ್ತು ಅಬಕಾರಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಅಬಕಾರಿ ಇಲಾಖೆಯಿಂದ ಒಂದು ಪ್ರದೇಶದ ಜನಸಂಖ್ಯೆಗನುಗುಣರಾಗಿ ಆ ಪ್ರದೇಶಕ್ಕೆ ವೈನ್‌ಷಾಪ್ ಸಿಎಲ್-2 ಲೈಸೆನ್ಸುಗಳ ಕೋಟಾ ನಿಗದಿ ಪಡಿಸಿದ್ದು ಯಾವ ವರ್ಷದಲ್ಲಾಗಿದೆ?

ಆ) ಒಂದು ಪ್ರದೇಶದಲ್ಲಿ ಮಾಪನಕ್ಕಿಂತ ಜಾಸ್ತಿ ಇರುವುದು ನಿಜವಲ್ಲವೆ? ಕೆಲವು ಸಂದರ್ಭಗಳಲ್ಲಿ ಮಾನ್ಯ ಸಚಿವರು ವಿಶೇಷಾಧಿಕಾರ ಉಪಯೋಗಿಸಿ ಕೋಟಾ ಬಿಡುಗಡೆ ಕೊಡಿಸುತ್ತಿದ್ದುದು ನಿಜವಲ್ಲವೆ?

ಇ) ಜನಸಂಖ್ಯೆಗನುಗುಣವಾಗಿ ಸಿಎಲ್-2 ಲೈಸೆನ್ಸುಗಳ ಕೋಟಾ ಪರಿಷ್ಕರಿಸಬೇಕಾದ ಅಗತ್ಯ ಸರ್ಕಾರಕ್ಕೆ ಕಂಡು ಬಂದಿದೆಯೇ, ಬಂದಲ್ಲಿ ಇದರ ಬಗ್ಗೆ ಕೈಗೊಂಡ ಕ್ರಮಗಳೇನು?

ಶ್ರೀ ಧರ್ಮಸಿಂಗ್ (ಗೃಹ ಮತ್ತು ಅಬಕಾರಿ ಸಚಿವರು)

ಅ) ಜೂನ್ 1987ರಲ್ಲಿ ಆಗಿದೆ.

ಆ) ಹೌದು

ಇ) ಹೌದು, ಪರಿಶೀಲನೆಯಲ್ಲಿದೆ.

ಮಲಪ್ರಭಾ ಯೋಜನೆಯ ಎರಡನೆಯ ಹಂತಕ್ಕೆ ಮೀಸಲಾದ ಹಣ

2107 - ಮಾನ್ಯ ವಸತಿ ಮತ್ತು ನಗರಾಭಿವೃದ್ಧಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

1) ಹುಬ್ಬಳ್ಳಿ - ಧಾರವಾಡ ಮಹಾನಗರಕ್ಕೆ ಮಲಪ್ರಭಾ ಯೋಜನೆ 2ನೇ ಹಂತಕ್ಕೆ ಮೀಸಲಾದ ಹಣವೆಷ್ಟು?

2) ಈ ಯೋಜನೆಯು ಈಗ ಯಾವ ಹಂತದಲ್ಲಿದೆ.

3) ಇದಕ್ಕಾಗಿ ಹುಬ್ಬಳ್ಳಿ-ಧಾರವಾಡ ಪ್ರಾಧಿಕಾರ ಕೊಟ್ಟ ಹಣವೆಷ್ಟು?

4) ಹುಡ್ಕೋದಿಂದ ಈ ಯೋಜನೆಗಾಗಿ ಸಾಲ ಪಡೆಯುವುದಕ್ಕೆ ಅರ್ಜಿಯನ್ನು ಎಂದು ಸಲ್ಲಿಸಲಾಗಿದೆ.

5) ಹುಡ್ಕೋದಿಂದ ಹಣ ಮಂಜೂರು ಆಗಿದ್ದಲ್ಲಿ ಈ ಕೆಲಸ ಯಾವ ಮಟ್ಟಕ್ಕೆ ಬಂದಿದೆ, ಹಾಗೂ ಇದು ಎಂದು ಪೂರ್ಣಗೊಳ್ಳುವುದು?

ಶ್ರೀ ಕೆ.ಜೆ. ಜಾರ್ಜ್ (ವಸತಿ ಮತ್ತು ನಗರಾಭಿವೃದ್ಧಿ ಸಚಿವರು) :

1) ಈ ಯೋಜನೆಯ ಅಂದಾಜು ವೆಚ್ಚವು 650 ಲಕ್ಷ ರೂಗಳು ಹುಬ್ಬಳ್ಳಿ-ಧಾರವಾಡ ಮಹಾನಗರಸಭೆಯು 95.00 ರೂಗಳನ್ನು ಹಾಗೂ ಹುಬ್ಬಳ್ಳಿ ಧಾರರಾಡ ನಗರಾಭಿವೃದ್ಧಿ ಪ್ರಾಧಿಕಾರವು 32.00 ಲಕ್ಷ ರೂಗಳನ್ನು ಅವರ ಪಾಲಿನಲ್ಲಿ ಭಾಗಶಃ ಈ ಯೋಜನೆಗೆ ಸಂದಾಯ ಮಾಡಿರುತ್ತಾರೆ. ಹುಡ್ಕೋ ಸಂಸ್ಥೆಯು 455 ಲಕ್ಷ ರೂಗಳ ಸಾಲವನ್ನು ಮಂಜೂರು ಮಾಡಿರುತ್ತಾರೆ.